ದರೂ ಕೂಡಾ ಅದೇ ವರ್ಗಕ್ಕೆ ಇದರ ಫಲ ಸಿಗುತ್ತದೆ. ಆದುದರಿಂದ ಇದನ್ನು ನಾನು ಸೂಚನೆ ಮಾಡುತ್ತಿದ್ದೇನೆ.

ಶ್ರೀ ವಿ. ಎಲ್. ಪಾಟೀಲ್.—ಇದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ರಮೇಶ್‌ಕುಮಾರ್.—ಇದನ್ನು 10 ಸಾವಿರ ರೂಪಾಯಿಗಳಿಂದ 20 ಸಾವಿರ ರೂಪಾಯಿಗಳಿಗೆ ಏರಿಸುವುದಕ್ಕೆ ಆಗುತ್ತದೆಯೇ ?

ಶ್ರೀ ವಿ. ಎಲ್. ಪಾಟೀಲ್.—ಈಗ ಇನ್‌ಕಂ ಟ್ಯಾಕ್ಸ್ ಲಿಮಿಟ್ 15 ಸಾವಿರದಿಂದ 18 ಸಾವಿರ ಮಾಡಿದ್ದಾರೆ. ಹಿಂದುಳಿದ ವರ್ಗಗಳಿಗೆ ಆದಾಯದ ಮಿತಿಯನ್ನು 15 ಸಾವಿರದಿಂದ 18 ಸಾವಿರ ಮಾಡಬೇಕೆಂದು ಈಗಾಗಲೇ ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್‌ಗೆ ಮನವಿಗಳು ಬಂದಿವೆ. ಅದನ್ನು ಅವರು ಪರಿಶೀಲನೆ ಮಾಡುತ್ತಿದ್ದಾರೆ.

ಶ್ರೀ ಕೆ. ಮಲ್ಲಪ್ಪ.—ಮಾನ್ಯ ಅಧ್ಯಕ್ಷರೇ, ಒಂದು ಸಲ ಜಾತಿ ಸರ್ಟಿಫಿಕೇಟ್ ಕೊಟ್ಟಮೇಲೆ ಅದನ್ನು ಪುನಃ ಕೊಡದಿರತಕ್ಕ ಪರಿಸ್ಥಿತಿಯನ್ನು ತರಲು ಸರ್ಕಾರ ಪ್ರಯತ್ನ ಮಾಡುತ್ತದೆಯೇ. ಒಂದು ಸಲ ಜಾತಿ ಸರ್ಟಿಫಿಕೇಟ್ ಕೊಟ್ಟಮೇಲೆ ಪುನಃ ಜಾತಿ ಸರ್ಟಿಫಿಕೇಟ್, ಜಾತಿ ಸರ್ಟಿಫಿಕೇಟ್ ಎಂದು ವಿನಾ ಕಾರಣ ವಿದ್ಯಾರ್ಥಿಗಳಿಗೆ ಕೇಳುತ್ತಿರುವುದರಿಂದ, ಅವರು ಬಹಳ ನೋವನ್ನು ಅನುಭವಿಸುತ್ತಿದ್ದಾರೆ. ಆದುದರಿಂದ ಒಂದು ಸಾರಿ ಜಾತಿ ಸರ್ಟಿಫಿಕೇಟ್ ಕೊಟ್ಟಮೇಲೆ ಪುನಃ ಅದನ್ನು ಕೇಳದಿರತಕ್ಕ ಪರಿಸ್ಥಿತಿಯನ್ನು ತರಬೇಕೆಂದು ಸರ್ಕಾರಕ್ಕೆ ತಮ್ಮ ಮೂಲಕ ಹೇಳುತ್ತೇನೆ.

ಶ್ರೀ ವಿ. ಎಲ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆ ಬೇರೆ. ಇದನ್ನು ಬೇರೆಯಾಗಿ ಕೇಳಿದರೆ ಇದಕ್ಕೆ ಉತ್ತರ ಕೊಡುತ್ತೇನೆ.

ವಿಷಯ : ಬಂಜರು ಭೂಮಿಯನ್ನು ಅರಣ್ಯವನ್ನಾಗಿ ಪರಿವರ್ತಿಸುವುದು.

ಪ್ರ. ಸಂಖ್ಯೆ 19 (9) ಶ್ರೀ ಕೆ. ಎಚ್. ಪಾಟೀಲ್ (ಗದಗ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ?

ಅ) ಪಾಳು ಭೂಮಿಯನ್ನು ಅರಣ್ಯವನ್ನಾಗಿ ಮಾರ್ಪಡಿಸುವ ಯೋಜನೆ ಏನಾದರೂ ಇದೆಯೇ ;

ಆ) ರಾಜ್ಯಾದ್ಯಂತ ವಿಶೇಷವಾಗಿ ಗದಗ್ ತಾಲ್ಲೂಕಿನಲ್ಲಿ ಮರಗಳನ್ನು ಬೆಳೆಸುವ ಯೋಜನೆಗಳನ್ನು ಹೆಚ್ಚಿಸುವ ಬಗ್ಗೆ ತೆಗೆದುಕೊಂಡ ಕ್ರಮಗಳೇನು ?

ಶ್ರೀ ಬಿ. ಎ. ಜೀವಿಜಯ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಇದೆ.

ಆ) 1. ವನ ನಿರ್ಮಾಣ ಕಾರ್ಯಕ್ರಮಗಳನ್ನು ಕೈಗೊಳ್ಳಲು 22 ಲಕ್ಷ ಎಕ್ರೆ ಸಿ ಮತ್ತು ಡಿ ವರ್ಗದ ಜಮೀನನ್ನು ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ವರ್ಗಾಯಿಸಲು ಸರ್ಕಾರ ಆದೇಶವನ್ನು ಹೊರಡಿಸಿದೆ.

2. 1983-84ರಿಂದ ವಿಶ್ವಬ್ಯಾಂಕಿನ ನೆರವಿನಿಂದ ನಡೆಸುವ ಸಾಮಾಜಿಕ ಅರಣ್ಯ ನಿರ್ಮಾಣ ಯೋಜನೆಯಡಿಯಲ್ಲಿ ಪಾಳು ಜಮೀನು, ಗೋಮಾಳ ತಟಾಗ್ರ ಮತ್ತು ರಸ್ತೆ ಬದಿಯಲ್ಲಿ ಮರಗಳನ್ನು ಬೆಳೆಸುವುದನ್ನು ಕೈಗೊಳ್ಳಲಾಗಿದೆ.

3. ವನ ನಿರ್ಮಾಣವನ್ನು ರಾಜ್ಯದ ಇತರೆ ಯೋಜನೆಗಳಾದ ಸಾಯಿಲ್ ಕನ್ಸರ್‌ವೇಷನ್ (ಅಪೋರ್‌ಸ್ಟೇಷನ್)ನಲ್ಲಿಯೂ ಅಳವಡಿಸಿಕೊಳ್ಳಲಾಗಿದೆ.

4. ವನ ನಿರ್ಮಾಣವನ್ನು ಬೃಹತ್ ಪ್ರಮಾಣದಲ್ಲಿ ಈ ಕೆಳಕಂಡ ಕೇಂದ್ರ ನೆರವಿನಿಂದ ನಡೆಸಲಾದ ಯೋಜನೆಗಳಲ್ಲೂ ತೆಗೆದುಕೊಳ್ಳಲಾಗಿದೆ.

1) ರೂರಲ್ ಫ್ಯೂವೆಲ್‌ವುಡ್ ಪ್ಲಾಂಟೇಷನ್ ಸ್ಕೀಂ
2) ಡಿ. ಪಿ. ಎ. ಪಿ.
3) ಆರ್. ಎಲ್. ಇ. ಜಿ. ಪಿ.
4) ಎನ್. ಆರ್. ಇ. ಪಿ.
5) ವನ ನಿರ್ಮಾಣವನ್ನು ಅರಣ್ಯ ಅಭಿವೃದ್ಧಿ ನಿಧಿ ಹಾಗೂ ಕರ್ನಾಟಕ ಅರಣ್ಯ ಪ್ಲಾಂಟೇಷನ್ ನಿಗಮದಡಿಯಲ್ಲಿಯೂ ತೆಗೆದುಕೊಳ್ಳಲಾಗಿದೆ. ಮೇಲ್ಕಾಣಿಸಿದ ಯೋಜನೆಗಳಿಗೆ ವರ್ಷಕ್ಕೆ ಸಾಕಷ್ಟು ಹಣವನ್ನು ಜಾಸ್ತಿ ಮಾಡಲಾಗಿದೆ. ಗದಗಿನಲ್ಲಿ 1985-86ರಲ್ಲಿ ಮೇಲ್ಕಾಣಿಸಿದ ನಾನಾ ಯೋಜನೆಗಳಡಿಯಲ್ಲಿ 135 ಹೆಕ್ಟೇರ್ ಪಾಳು ಜಮೀನಿನಲ್ಲಿ ವನ ನಿರ್ಮಾಣ ಮಾಡಲಾಗುವುದು.

ಶ್ರೀ ಕೆ. ಎಚ್. ಪಾಟೀಲ್.—ಸ್ವಾಮಿ, ಹಣ ಖರ್ಚಾಗಿದೆ ನಿಜ. ಆದರೆ ಕೆಲಸ ಆಗಿದೆಯೇ ? ಗದಗ್ ತಾಲ್ಲೂಕಿನಲ್ಲಿ 33 ಮೈಲಿ ಉದ್ದದ ಕಪ್ಪತ್ ಹಿಲ್ ಎಂಬ ಪ್ರದೇಶ ಇದೆ. ಒಂದಾನೊಂದು ಕಾಲಕ್ಕೆ ಇದು ಅರಣ್ಯ ಪ್ರದೇಶವಾಗಿದ್ದಿತು, ಇವೊತ್ತು ಇದು ಬಂಜರು ಭೂಮಿಯಾಗಿದೆ. ಈ ಕಪ್ಪತ್ ಹಿಲ್‌ನಲ್ಲಿ ತಾವು ಯಾವ ತರಹ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೀರಿ ? ಇದೂ ಅಲ್ಲದೆ, ಗದಗ್ ತಾಲ್ಲೂಕಿನಲ್ಲಿ ಅನೇಕ ಕಡೆಗಳಲ್ಲಿ, ಉದಾಹರಣೆಗೆ ಮಲ್ಲಸಮುದ್ರ ಇತ್ಯಾದಿ ಕಡೆಗಳಲ್ಲಿ ಫಾರೆಸ್ಟ್ ಕೂಡಾ ಇದೆ. ಇಲ್ಲಿ ಹಿಂದೆ ಅಫಾರ್‌ಸ್ಟೇಷನ್ ಮಾಡಿದ್ದು ಅದು ಉತ್ತಮವಾದ ಫಸಲನ್ನು ಕೊಟ್ಟಿದೆ. ಇದುವರೆಗೆ ಪುನಃ ಅಲ್ಲಿ ಡೆವಲಪ್‌ಮೆಂಟ್ ಏತಕ್ಕೆ ಮಾಡಿಲ್ಲ ? ಮೂರನೆಯದಾಗಿ ಗದಗ್‌ನಲ್ಲಿರತಕ್ಕ ಜೂ ನಲ್ಲಿ ಫಾರೆಸ್ಟ್ ಗಿಡಗಳನ್ನು ಬೆಳೆದಿದ್ದರೂ ಕೂಡಾ, ಅಲ್ಲಿ ಇನ್ನೂ ಬೆಳೆಯುವುದಕ್ಕೆ ಸಾಕಷ್ಟು ಅವಕಾಶ ಇದೆ, ಆದರೂ ಫಾರೆಸ್ಟ್ ಡಿಪಾರ್ಟ್‌ಮೆಂಟಿನವರು ಹಣದ ಅಭಾವ ಆಗಿದೆ ಎಂದು ಹೇಳುತ್ತಿದ್ದಾರೆ, ಇದು ನಿಜವೇ ? ಹಾಗಿಲ್ಲದಿದ್ದರೆ ಹಣ ಸರಿಯಾಗಿ ವಿನಿಯೋಗ ಮಾಡದೇ ಅದಕ್ಷತೆಯನ್ನು ತೋರಿಸಿದ ಹಾಗೆ ಆಗುವುದಿಲ್ಲವೇ ? ಗದಗ್ ತಾಲ್ಲೂಕಿನಲ್ಲಿ ಅರಣ್ಯ ಬೆಳೆಯಲು ಸಾಕಷ್ಟು ಪ್ರಯತ್ನ ಮಾಡಲಾಗುತ್ತಿದೆಯೇ ?

ಶ್ರೀ ಬಿ. ಎ. ಜೀವಿಜಯ.—ಮಾನ್ಯ ಅಧ್ಯಕ್ಷರೇ, ಗದಗ್ ತಾಲ್ಲೂಕಿನಲ್ಲಿ ಸಾಕಷ್ಟು ಅರಣ್ಯವನ್ನು ಬೆಳೆಯಲಿಕ್ಕೆ ನಮ್ಮ ಇಲಾಖೆಯವರು ಪ್ರಯತ್ನಪಟ್ಟಿದ್ದಾರೆ. 1983-84ನೇ ಸಾಲಿನಲ್ಲಿ 32 ಹೆಕ್ಟೇರ್ ಅರಣ್ಯ ಬೆಳೆಸಿದ್ದಾರೆ. 1984-85ರಲ್ಲಿ 130 ಹೆಕ್ಟೇರ್‌ನಲ್ಲಿ ಅರಣ್ಯ ಬೆಳೆಸಿದ್ದಾರೆ. ಈ ಸಲ 135 ಹೆಕ್ಟೇರ್‌ನಲ್ಲಿ ಅರಣ್ಯ ಬೆಳೆಸುತ್ತೇವೆ. ಒಂದೇ ಸಾರಿ ಗದಗ್‌ನಲ್ಲಿ ಎಲ್ಲಾ ಕಡೆ ಅರಣ್ಯ ಬೆಳೆಸುವುದಕ್ಕೆ ಆಗುವುದಿಲ್ಲ. ಗದಗ್ ತಾಲ್ಲೂಕಿನಲ್ಲಿ 760 ಹೆಕ್ಟೇರ್ ಅರಣ್ಯಪ್ರದೇಶ ಇದೆ. ಇನ್ನೂ ಒಂದುಲಕ್ಷ ಹೆಕ್ಟೇರ್ ಅರಣ್ಯ ಬೆಳೆಸತಕ್ಕ ಭೂಮಿ ಇದೆ. ಇಲ್ಲಿ ಒಂದೇಸಲ ಅರಣ್ಯ ಬೆಳೆಸುವುದಕ್ಕೆ ಸಾಧ್ಯವಾಗುವುದಿಲ್ಲ. ಹಂತಹಂತವಾಗಿ ಅರಣ್ಯವನ್ನು ಬೆಳೆಸಬೇಕಾಗುತ್ತದೆ. ಮತ್ತೊಂದು ಪ್ರಶ್ನೆ "ಜೂ" ಬಗ್ಗೆ ಕೇಳಿದ್ದಾರೆ. ಅದು ಇದರ ವ್ಯಾಪ್ತಿಯಲ್ಲಿ ಬರುವುದಿಲ್ಲ. ಅದಕ್ಕೆ ಬೇರೆ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್.—ನಾನು ಕೇಳಿದ್ದುದು ಜೂ ಬಗ್ಗೆ ಅಲ್ಲ. ಅಲ್ಲಿ ಪ್ರಾಣಿಗಳಿಗೆ ಅನುಕೂಲವಾಗತಕ್ಕ ವಾತಾವರಣ ನಿರ್ಮಾಣ ಮಾಡಲಿಕ್ಕೆ, ಅಲ್ಲಿರತಕ್ಕ ಜಮೀನಿನಲ್ಲಿ ಫಾರೆಸ್ಟ್ ಬೆಳೆಸಬೇಕಾಗುತ್ತದೆ. ಕೇಂದ್ರ ಸರ್ಕಾರದವರು ಈ ಫಾರೆಸ್ಟ್ ಬೆಳೆಸುವ ಕಾರ್ಯಕ್ರಮಕ್ಕೆ ನೂರಕ್ಕೆ ನೂರರಷ್ಟು ಸಹಾಯ ಮಾಡುತ್ತಿದ್ದಾರೆ. ಎಷ್ಟು ಭೂಮಿಯಾದರೂ ಹಣದ ಕೊರತೆ ಇಲ್ಲ. ಸಾವಿರ ಎಕರೆಯಾಗಲಿ ಲಕ್ಷ ಎಕರೆಯಾಗಲಿ, ಅರಣ್ಯ ಬೆಳೆಸುವ ಕಾರ್ಯಕ್ರಮ ತೆಗೆದುಕೊಂಡರೆ, ಸಂಪೂರ್ಣ ಹಣವನ್ನು ಕೇಂದ್ರ ಸರ್ಕಾರದವರು ಅಫಾರೆಸ್ಟೇಷನ್ ಸಲುವಾಗಿ ಕೊಡುತ್ತಿದ್ದಾರೆ. ಅದನ್ನು ಉಪಯೋಗ ಮಾಡಿಕೊಂಡು ಅರಣ್ಯ ಬೆಳೆಸುತ್ತೀರಾ ?

ಶ್ರೀ ಬಿ. ಎ. ಜೀವಿಜಯ.—ಮಾನ್ಯ ಅಧ್ಯಕ್ಷರೇ, ಕೇಂದ್ರ ಸರ್ಕಾರದವರು ನೂರಕ್ಕೆ ನೂರರಷ್ಟು ಹಣ ಕೊಡುತ್ತಿಲ್ಲ. ಆದರೆ ಕೇಂದ್ರ ಸರ್ಕಾರ ಇದಕ್ಕೆ ಸಾಕಷ್ಟು ಹಣ ಕೊಡುತ್ತಿದೆ. ರಾಜ್ಯದ ಎಲ್ಲಾ ಪ್ರದೇಶಗಳಲ್ಲೂ ಕೂಡಾ ಅರಣ್ಯ ಬೆಳೆಸಬೇಕು. ಬರೀ ಗದಗ್‌ನಲ್ಲಿ ಮಾತ್ರ ಅರಣ್ಯ ಬೆಳೆಸಿದರೆ ಸಾಲದು. ಗದಗ್ ತಾಲ್ಲೂಕಿನಲ್ಲಿ ನಮ್ಮ ಏನು ಕಾರ್ಯಕ್ರಮ ಇದೆ, ಯೋಜನೆ ಇದೆ, ಅದೇ ರೀತಿ ಪ್ರತಿಯೊಂದು ತಾಲ್ಲೂಕಿನಲ್ಲೂ ಕೂಡಾ ಅರಣ್ಯ ಬೆಳೆಸುವುದಕ್ಕೆ ಯೋಜನೆ ಇದೆ.

ಶ್ರೀ ಕೆ. ಎಚ್. ಪಾಟೀಲ್.—ಗದಗ್ ತಾಲ್ಲೂಕಿನಲ್ಲಿ ಫಾರೆಸ್ಟ್ ಬೆಳೆಸುವುದಕ್ಕೆ ಏನು ಯೋಜನೆಗಳನ್ನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ.

ಶ್ರೀ ಬಿ. ಎ. ಜೀವಿಜಯ.—ತಾವು ಹೇಳಿದಹಾಗೆ ಕೇಂದ್ರ ಸರ್ಕಾರದಿಂದ ಆರ್.ಎಲ್.ಇ.ಜಿ.ಪಿ. ಡಿ.ಪಿ.ಎ.ಪಿ., ಎನ್. ಆರ್.ಇ.ಪಿ., ಈ ರೀತಿ ಅನೇಕ ಯೋಜನೆಗಳ ಅಡಿಯಲ್ಲಿ ಅರಣ್ಯ ಬೆಳೆಸುವುದಕ್ಕೆ ಹಣ ಬರುತ್ತದೆ, ಅದರ ಪ್ರಕಾರ ಕಾಡು ಬೆಳೆಸುತ್ತಿದ್ದೇವೆ. ವೆಸ್ಟ್‌ನ್ ಘಾಟ್ಸ್ ಡೆವಲಪ್‌ಮೆಂಟ್ ಕಾರ್ಯಕ್ರಮದ ಮುಖಾಂತರವೂ ರಾಜ್ಯದಲ್ಲಿ ಅರಣ್ಯ ಬೆಳೆಸುತ್ತಿದ್ದೇವೆ, ಅದೇ ರೀತಿ ಗದಗ್‌ನಲ್ಲೂ ಕೂಡಾ ಅರಣ್ಯ ಬೆಳೆಸುವುದಕ್ಕೆ ಪ್ರಯತ್ನಮಾಡುತ್ತಿದ್ದೇವೆ,

ಶ್ರೀ ಕೆ. ಎಚ್. ಪಾಟೀಲ್.—ಬಂಜರು ಭೂಮಿಯಲ್ಲಿ ಅರಣ್ಯ ಬೆಳೆಸುವ ಯೋಜನೆ ಇದೆಯಲ್ಲ ಅದೇನು ಎಂದು ಹೇಳುತ್ತೀರಾ ?

ಶ್ರೀ ಬಿ. ಎ. ಜೀವಿಜಯ.—ಅರಣ್ಯ ಇಲಾಖೆಯ ನಾನಾ ಯೋಜನೆಗಳ ಮೂಲಕ ಅರಣ್ಯವನ್ನು ಬೆಳೆಸುತ್ತಿದೆ. ಅರಣ್ಯ ಇಲಾಖೆಯ ಮುಖಾಂತರ 35 ಸಾವಿರ ಹೆಕ್ಟೇರ್‌ನಲ್ಲಿ ಅರಣ್ಯ ಬೆಳೆಸುವುದರ ಜೊತೆಗೆ ಡಿಗ್ರೇಡೆಡ್ ಫಾರೆಸ್ಟ್‌ನಲ್ಲಿ 30 ಸಾವಿರ ಹೆಕ್ಟೇರ್‌ನಲ್ಲಿ ಅರಣ್ಯ ಬೆಳೆಸುತ್ತಿದ್ದೇವೆ. ಸೋಶಿ

ಯಲ್ ಫಾರೆಸ್ಟ್ರಿ ಸ್ಕೀಂನಲ್ಲಿ, ಫಾರೆಸ್ಟ್ ಪ್ಲಾಂಟೇಷನ್ ಕಾರ್ಪೊರೇಷನ್ ಮುಖಾಂತರ ಅರಣ್ಯ ಬೆಳೆಸುತ್ತಿದ್ದೇವೆ. ಲ್ಯಾಂಡ್‌ಲೆಸ್ ಪೀಪಲ್‌ಗೆ ಜಾಗಕೊಟ್ಟು ಅದರಲ್ಲೂ ಕೂಡಾ ಅರಣ್ಯ ಬೆಳೆಸುತ್ತಿದ್ದೇವೆ. ತಾವು ಕೇಳುತ್ತಿರತಕ್ಕಂಥಾದ್ದು ಡಿಗ್ರೇಡೆಡ್ ಫಾರೆಸ್ಟ್‌ನಲ್ಲಿ ಯಾವರೀತಿ ಅರಣ್ಯ ಬೆಳೆಸುತ್ತಿದ್ದೀರಿ ಎಂದು. 1978ರಿಂದಲೂ ಕೂಡಾ, ಬಹುಶಃ ತಾವು ಆಗ ಮಂತ್ರಿಗಳಾಗಿದ್ದರೋ ಏನೋ ಗೊತ್ತಿಲ್ಲ, ಡಿಗ್ರೇಡೆಡ್ ಫಾರೆಸ್ಟ್‌ನಲ್ಲಿ ಜಾಯಿಂಟ್ ಸೆಕ್ಟರ್ ಮುಖಾಂತರ ಕಾಡು ಬೆಳೆಸುತ್ತಿದ್ದೇವೆ.

ಶ್ರೀ ಜಿ. ಎಸ್. ಬಸವರಾಜ್.—ಮಾನ್ಯ ಅಧ್ಯಕ್ಷರೇ, ರಾಜ್ಯದ ಒಳನಾಡಿನಲ್ಲಿ ಮರಗಳನ್ನು ನೆಡುತ್ತಿದ್ದೀರಿ. ಸಮುದ್ರದ ಕರಾವಳಿಯ ಭಾಗದಲ್ಲಿ ಮರಗಳನ್ನು ನೆಟ್ಟರೆ ಸಮುದ್ರದ ಕೊರೆತವನ್ನು ತಡೆಗಟ್ಟಬಹುದು. ಅಲ್ಲಿ ಏತಕ್ಕೆ ಮರಗಳನ್ನು ಬೆಳೆಸಬಾರದು ಎಂದು ಕೇಳುತ್ತೇನೆ.

ಶ್ರೀ ಬಿ. ಎ. ಜೀವಿಜಯ.—ಈಗ ಸಮುದ್ರ ಕೊರೆತವನ್ನು ತಡೆಗಟ್ಟಲಿಕ್ಕೆ ಮಂಗಳೂರು, ಕಾರವಾರ ಮುಂತಾದ ಕಡೆಗಳಲ್ಲಿ ಪ್ಲಾಂಟೇಷನ್ ಬೆಳೆಸುತ್ತಿದ್ದೇವೆ.

ಶ್ರೀ ಬಿ. ಕೆ. ಕೋಳಿವಾಡ.—ಮಾನ್ಯ ಅಧ್ಯಕ್ಷರೇ, ಸರ್ಕಾರದವರು ಅರಣ್ಯವನ್ನು ಬೆಳೆಸುವುದಕ್ಕಾಗಿ ಹಣವನ್ನು ಖರ್ಚುಮಾಡುತ್ತಿರುವುದು ತುಂಬಾ ಸಂತೋಷದ ವಿಚಾರ. ಆದರೆ ಬೆಳೆಸಿದ ಗಿಡವನ್ನು ಉಳಿಸತಕ್ಕ ಕಾರ್ಯಕ್ರಮವನ್ನೇನಾದರೂ ಹಾಕಿಕೊಂಡಿರುತ್ತೀರಾ ? ಪ್ರತಿನಿತ್ಯ ಸಾವಿರಾರು ಗಿಡಗಳನ್ನು ಕಡಿಯುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಆದುದರಿಂದ ಈ ಬಗ್ಗೆ ಸರ್ಕಾರದ ಕಾರ್ಯಕ್ರಮವೇನು ?

ಶ್ರೀ ಬಿ. ಎ. ಜೀವಿಜಯ.—ಅಧ್ಯಕ್ಷರೇ, ಅರಣ್ಯವನ್ನು ಬೆಳೆಸುತ್ತಿದ್ದೇವೆ ಹಾಗೂ ಅದನ್ನು ಉಳಿಸುವುದಕ್ಕೂ ಪ್ರಯತ್ನಪಡುತ್ತಿದ್ದೇವೆ. 1978ನೇ ಇಸವಿಯ ಹೊತ್ತಿಗೆ 23 ಸಾವಿರ ಹೆಕ್ಟೇರ್ ಅರಣ್ಯ ಭೂಮಿಯನ್ನು ಜನರು ಅತಿಕ್ರಮ ಮಾಡಿದ್ದರು. ಈ ಪ್ರಶ್ನೆಯ ವ್ಯಾಪ್ತಿಯೊಳಗೆ ಈ ವಿಷಯ ಬರದೇ ಇದ್ದರೂ ಉತ್ತರ ಹೇಳಬೇಕಾಗಿದೆ. ಬಂಜರು ಭೂಮಿಯಲ್ಲೂ ಅರಣ್ಯವನ್ನು ಬೆಳೆಸುತ್ತಿದ್ದೇವೆ. ಗೋಮಾಳದಲ್ಲಿ ಅರಣ್ಯವನ್ನು ಬೆಳೆಸಕೂಡದು ಎನ್ನುವ ಒತ್ತಡ ಬರುತ್ತಿದೆ. 1978ಕ್ಕೆ ಹಿಂದಿನ ಅತಿಕ್ರಮಣದ ಬಗ್ಗೆ ಗವರ್ನಮೆಂಟ್ ಆಫ್ ಇಂಡಿಯಾಕ್ಕೆ ಬರೆದು ಕೇಳಿದ್ದೇವೆ, 1978ನೇ ಇಸವಿ ನಂತರ ಎನ್‌ಕ್ರೋಚ್ ಮಾಡುವುದಕ್ಕೆ ಬಿಡುವುದಿಲ್ಲ. ಅರಣ್ಯದಲ್ಲಿ ಕಳ್ಳಸಾಗಾಣಿಕೆಯನ್ನು ತಡೆಗಟ್ಟುವುದಕ್ಕೂ ಪ್ರಯತ್ನಪಡುತ್ತಿದ್ದೇವೆ. ಜನರು ಜೀವನೋಪಾಯಕ್ಕೆ ಉರುವಲು ಕಟ್ಟಿಗೆಯನ್ನೂ ಆಶ್ರಯಿಸಬೇಕಾಗಿದೆ. 1978ನೇ ಇಸವಿ ನಂತರ ಆದ ಅತಿಕ್ರಮಣವನ್ನು ನಾವು ಏನು ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೆ ಮುಂದೆ ಅತಿಕ್ರಮಣವನ್ನು ಮಾನವೀಯತೆ ದೃಷ್ಟಿಯಿಂದ ನೋಡಬೇಕಾಗಿದೆ.

ಶ್ರೀ ಯು. ಭೂಪತಿ.—ಅಧ್ಯಕ್ಷರೇ, ಬಂಜರು ಜಮೀನಿನಲ್ಲಿ ಅರಣ್ಯ ಬೆಳೆಸದೆ, ಹತ್ತಾರುವರ್ಷಗಳಿಂದ ಮಾಡಿಕೊಂಡು ಬಂದಿರತಕ್ಕ ಜಮೀನಿನಲ್ಲಿ ಅರಣ್ಯಕ್ಕೆ ಸಂಬಂಧಪಟ್ಟ ಗಿಡಗಳನ್ನು ನೆಡುವುದನ್ನು ತಪ್ಪಿಸಬೇಕು.

ಶ್ರೀ ಬಿ. ಎ. ಜೀವಿಜಯ —ನಾವು ಬಂಜರು ಜಮೀನಿನಲ್ಲಿಯೇ ಅರಣ್ಯ ಬೆಳೆಸುವುದು, ಇಂತಹ ಬಂಜರು ಜಮೀನಿನಲ್ಲಿ ಉತ್ತಮ ಭೂಮಿಯನ್ನು ಎನ್‌ಕ್ರೋಚ್ ಮಾಡಿಕೊಂಡಿರುತ್ತಾರೆ. ಅಂತಹ ಭೂಮಿಯಲ್ಲಿ ಅರಣ್ಯವನ್ನು ಬೆಳೆಸುತ್ತೇವೆ. 1978ರಿಂದೀಚೆಗೆ ಇಂತಹ ಅತಿಕ್ರಮಣವನ್ನು ತಡೆಗಟ್ಟಲಾಗಿದೆ.

ವಿಷಯ : ಮೈಸೂರು ಜಿಲ್ಲೆ ಟಿ. ನರಸೀಪುರ ತಾಲ್ಲೂಕು ಮೂಗೂರು ಬಳಿ ಅಡ್ಡ ಹಳ್ಳಕ್ಕೆ ಸೇತುವೆ ಕಟ್ಟುವ ಬಗ್ಗೆ.

ಪ್ರ. ಸಂಖ್ಯೆ 20 (53) ಶ್ರೀ ಬಿ. ರಾಜೂಗೌಡ (ಹನೂರು).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಮೈಸೂರು ಜಿಲ್ಲೆಯ ಟಿ. ನರಸೀಪುರ ತಾಲ್ಲೂಕು ಮೂಗೂರು ಬಳಿಯಿರುವ ಅಡ್ಡಹಳ್ಳಕ್ಕೆ ಸೇತುವೆ ಕಾಲುದಾರಿ ಯಾವಾಗ ಪೂರ್ತಿಗೊಂಡಿತು ;

ಆ) ಇದಕ್ಕೆ ವೆಚ್ಚವಾಗಿರುವ ಮೊಬಲಗೆಷ್ಟು ;

ಇ) ಇದಕ್ಕಿಂತ ಹತ್ತು ವರ್ಷಗಳ ಹಿಂದೆಯೇ ನಿರ್ಮಾಣವಾಗಿರತಕ್ಕ ಸೇತುವೆ ಬಹಳ ಸುಸ್ಥಿತಿಯಲ್ಲಿದ್ದರೂ ಈ ಸೇತುವೆ ದುರಸ್ತಿಗೆ ಬರಲು ಕಾರಣವೇನು ;

ಈ) ದುರಸ್ತಿಗಾಗಿ ಎಷ್ಟು ಹಣ ವೆಚ್ಚವಾಗಿದೆ :

ಉ) ಮೇಲ್ಕಂಡ ದುರಸ್ತಿ ಕಾಮಗಾರಿಯನ್ನು ಇಲಾಖೆಯ ಅಥವಾ ಕಂಟ್ರಾಕ್ಟರ್ ಮೂಲಕ ಮಾಡಿಸಲಾಗಿದೆಯೆ ?